**ಇಂದು ದಿನಾಂಕ 22.11.2025 ರಂದು ಡಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರಿಂದಃ**

**1.** ನಾನು ಓದಿಲ್ಲ. ದಾವೆ ಹಾಕಿದ ನಂತರ ನಾವು ಸಲ್ಲಿಸಿದ ತಕರಾರಿನ ಬಗ್ಗೆ ಗೊತ್ತು. ನನ್ನ ತಕರಾರಿನ ಜೊತೆಗೆ ದಾಖಲೆಗಳನ್ನು ಹಾಕಿಲ್ಲ ಎಂದರೆ ಹಾಕಿದ್ದೇನೆ ಎನ್ನುತ್ತಾರೆ. ಸಾಕ್ಷಿ ಪ್ರಮಾಣ ಪತ್ರದ ಜೊತೆಗೆ ಯಾವುದೇ ದಾಖಲೆಗಳನ್ನು ಹಾಕಿಲ್ಲ ಎಂದರೆ ಹಾಕಿದ್ದೇನೆ ಎನ್ನುತ್ತಾರೆ. ನಾನು ಯಾವುದೇ ದಾಖಲೆಗಳನ್ನು ಗುರುತಿಸಿಲ್ಲ ಎಂದರೆ ಹಾಕಿದ್ದೇನೆ ಎನ್ನುತ್ತಾರೆ. ವಾದಿ ಹಾಕಿರುವ ದಾಖಲೆಗಳನ್ನು ಓದಿದ್ದೀರ ಮತ್ತು ತಿಳಿದುಕೊಂಡಿದ್ದೀರ ಎಂದರೆ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ವಾದಿ ಹಾಕಿರುವ ವಂಶವೃಕ್ಷವನ್ನು ತಿಳಿದುಕೊಂಡಿದ್ದೇನೆ. ನನಗೆ ಇಬ್ಬರು ತಂಗಿಯರು ಗಾಯಿತ್ರಿ ಮತ್ತು ಗಂಗರತ್ನಮ್ಮ ಇದ್ದಾರೆ ಎಂದರೆ ನಿಜ. ಅವರನ್ನು ವಂಶವೃಕ್ಷದಲ್ಲಿ ಸೇರಿಸಿಲ್ಲ. ನಾನು, ವಾದಿ ಮತ್ತು 2 ನೇ ಪ್ರತಿವಾದಿ ಚೆನ್ನಾಗಿದ್ದೇವೆ ಎಂದರೆ ಮೊದಲು ಚೆನ್ನಾಗಿದ್ದೆವು ಎನ್ನುತ್ತಾರೆ. ನಾನು ತಕರಾರು ಸಲ್ಲಿಸುವಾಗ ಅವರ ಜೊತೆ ಚೆನ್ನಾಗಿದ್ದೆನ ಎಂದರೆ ಇಲ್ಲ ಎನ್ನುತ್ತಾರೆ. ವಾದಿ ದಾವೆಯಲ್ಲಿ ಹೇಳಿರುವುದು ಎಲ್ಲಾ ಸತ್ಯ ಎಂದು ಹೇಳಿದ್ದೇನೆ. ನಾನು ದಾವೆ ಹಾಕಿದ ನಂತರ ವಾದಿಯ ಮಗನನ್ನು ನನ್ನ ತಂಗಿಯರನ್ನು ಯಾಕೆ ಸೇರಿಸಿಲ್ಲ ಎಂದರೆ ಕೇಳಿಲ್ಲ. ಅವರು ಮಾತನಾಡುತ್ತಿರಲಿಲ್ಲ. ನನ್ನ ತಂಗಿಯರನ್ನು ಸೇರಿಸು ಎಂದು ನಾನು ಎಲ್ಲೂ ಹೇಳಿಲ್ಲ. ನನ್ನ ತಾತನ 4 ಜನ ಹೆಣ್ಣು ಮಕ್ಕಳನ್ನು ಯಾಕೆ ಸೇರಿಸಿಲ್ಲ ಎಂದು ಕೇಳಿಲ್ಲ. ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿಲ್ಲ. ನನ್ನ ತಂದೆ ಪಿಳ್ಳಪ್ಪ 2011 ರಲ್ಲಿ ಮೃತರಾಗಿದ್ದಾರೆ. 4 ನೇ ಪ್ರತಿವಾದಿಗೆ ನಾನು, ಗಾಯಿತ್ರಿ, ಗಂಗರತ್ನಮ್ಮ ಮತ್ತು ನನ್ನ ತಂದೆ ನಿಪಿ-58 ರ ಪ್ರಕಾರ ದಿನಾಂಕಃ07.08.2004 ರಂದು 1 ಐಟಂ ಆಸ್ತಿಯಲ್ಲಿ 20 ಗುಂಟೆಯನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-58 ನ್ನು ತೋರಿಸಲಾಗಿ ಅದರಲ್ಲಿ ತನ್ನ ಮತ್ತು ತನ್ನ ಕುಟುಂಬದ ಸದಸ್ಯರ ಸಹಿಗಳು ಇವೆ ಎಂದು ಒಪ್ಪಿಕೊಂಡಿದ್ದಾರೆ. ನಾನು, ನನ್ನ ಸಹೋದರಿಯರು ಮತ್ತು ನನ್ನ ತಂದೆ ಎಲ್ಲರೂ ನೋಂದಣಿ ಕಛೇರಿಗೆ ಹೋಗಿ ಫೋಟೊ ಕೊಟ್ಟು ದಾಖಲೆಯನ್ನು 4 ನೇ ಪ್ರತಿವಾದಿಗೆ ನೋಂದಣಿ ಮಾಡಿಸಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರವಾದ ನಂತರ 7 ವರ್ಷಗಳ ಕಾಲ ನನ್ನ ತಂದೆ ಬದುಕಿದ್ದರು ಎಂದರೆ ನಿಜ. ನನ್ನ ತಂದೆ ಸದರಿ ಕ್ರಯಪತ್ರ ಸರಿ ಇಲ್ಲ ಎಂದು ಪ್ರಶ್ನಿಸಿ ಎಲ್ಲೂ ದಾವೆ ಹಾಕಿಲ್ಲ. ನಾನು ಮತ್ತು ನನ್ನ ತಂಗಿಯರು ಸಹ ಹಾಕಿಲ್ಲ ಎಂದರೆ ನಿಜ.

**2.** ಕ್ರಯಪತ್ರವಾದ ನಂತರ 1 ಐಟಂ ಆಸ್ತಿಯ 20 ಗುಂಟೆಗೆ 4 ನೇ ಪ್ರತಿವಾದಿಗೆ ಮ್ಯೂಟೇಶನ್ ಆಗಿದೆ ಎಂದರೆ ಗೊತ್ತಿಲ್ಲ. ಆರ್.ಟಿ.ಸಿ.ಯಲ್ಲಿ 20 ಗುಂಟೆಗೆ 4 ನೇ ಪ್ರತಿವಾದಿಯ ಹೆಸರು ಬಂತು ಎಂದರೆ ಗೊತ್ತಿಲ್ಲ. ಯಾರ ಹೆಸರಿನಲ್ಲಿ ಸದರಿ ಆಸ್ತಿಗೆ ಖಾತೆ ಇದೆ ಎಂದು ತಿಳಿದುಕೊಂಡಿಲ್ಲ. ನನ್ನ ತಂದೆ ನಮ್ಮ 4 ಜನ ಅಣ್ಣ-ತಮ್ಮಂದಿರ ಮಧ್ಯೆ ಭಾಗವಾಗಿದೆ ನಾವು 4 ಜನ ಸೇರಿ 4 ನೇ ಪ್ರತಿವಾದಿಗೆ ಮಾರುತ್ತಿದ್ದೇವೆ ಎಂದು ಒಕ್ಕಣೆ ಇದೆ ಎಂದರೆ ಭಾಗವಾಗಿಲ್ಲ ಎನ್ನುತ್ತಾರೆ. ನಿಪಿ-58 ರಲ್ಲಿ ಆ ರೀತಿ ಬರೆದಿರುವುದು ತಪ್ಪು. ನಾವು 4 ನೇ ಪ್ರತಿವಾದಿಯ ಜೊತೆ ನೋಂದಣಿ ಕಛೇರಿಗೆ ಯಾವ ಕಾರಣಕ್ಕೆ ಹೋದೆವು ಎಂದು ವಿಚಾರಿಸಿದ್ದೀರ ಎಂದರೆ ದಾವೆ ಹಾಕುವವರೆಗು ತಿಳಿದಿರಲಿಲ್ಲ ಎನ್ನುತ್ತಾರೆ. ಸದರಿ 20 ಗುಂಟೆಯ ಪೂರ್ವಕ್ಕೆ ಕೃಷ್ಣಪ್ಪ ಜಮೀನು ಎಂದರೆ ನಿಜ. ಪಶ್ಚಿಮಕ್ಕೆ ಮುನಿಶಾಮಪ್ಪ, ಉತ್ತರಕ್ಕೆ Wood Rich ಜಮೀನು ಮತ್ತು ದಕ್ಷಿಣಕ್ಕೆ 1 ನೇ ಪ್ರತಿವಾದಿ ಜಮೀನು ಎಂದರೆ ನಿಜ. ಸದರಿ 20 ಗುಂಟೆಯನ್ನು ನಾನು ಮತ್ತು ನನ್ನ ತಂದೆ 4 ನೇ ಪ್ರವಾದಿಗೆ ಮಾರಾಟ ಮಾಡುವ ಮೊದಲು ಸ್ವಾಧೀನದಲ್ಲಿ ಇದ್ದೆವು ಎಂದರೆ ನಿಜ. ದಿನಾಂಕಃ 07.04.2004 ರಿಂದ ನಾನು ಸದರಿ 20 ಗುಂಟೆಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿ 20 ಗುಂಟೆಯಲ್ಲಿ ನಾವು ಈಗಲೂ ವ್ಯವಸಾಯ ಮಾಡುತ್ತಿದ್ದೇವೆ. ಆ ಬಗ್ಗೆ ದಾಖಲೆ ಕೊಟ್ಟಿಲ್ಲ. 4 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಖಾತೆ ಮತ್ತು ಮ್ಯೂಟೇಶನ್‌ನ್ನು ಇಲ್ಲಿಯವರೆಗು ಪ್ರಶ್ನಿಸಿಲ್ಲ ಎಂದರೆ ನಿಜ. 4 ನೇ ಪ್ರತಿವಾದಿ ನಿರಂತರವಾಗಿ ವ್ಯವಸಾಯ ಮಾಡಿಕೊಂಡು ಸದರಿ 20 ಗುಂಟೆಯಲ್ಲಿ ರಾಗಿ ಬೆಳೆದಿದ್ದಾರೆ ಎಂದರೆ ಎಲ್ಲರೂ ಇದ್ದೇವೆ ಎನ್ನುತ್ತಾರೆ. 20 ಗುಂಟೆಯಲ್ಲಿ 4 ನೇ ಪ್ರತಿವಾದಿ, 20 ಗುಂಟೆಯಲ್ಲಿ ವಾದಿ, 20 ಗುಂಟೆಯಲ್ಲಿ 1 ನೇ ಪ್ರತಿವಾದಿ, 20 ಗುಂಟೆಯಲ್ಲಿ 2 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಎಲ್ಲರೂ ಮಾಡುತ್ತಿದ್ದಾರೆ ಎನ್ನುತಾರೆ. ನಾಗಪ್ಪ ಬಿನ್ ಚಿಕ್ಕಓಬಯ್ಯ ಎಂದರೆ 2 ನೇ ಪ್ರತಿವಾದಿ ಎಂದರೆ ನಿಜ. ನಿಪಿ-58 ಕ್ಕೆ ಸಾಕಿಯಾಗಿ ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

**3.** PW.1 ರವರು ದಾವೆಯಲ್ಲಿ ಏನು ಸಾಕ್ಷಿ ಹೇಳಿದ್ದಾರೆ ಅದು ಸತ್ಯ. 1994-95 ರ ಹಿಂದೆ ನನ್ನ ತಾತನ 4 ಜನ ಗುಂಡು ಮಕ್ಕಳು ದಾವಾ 1 ರಿಂದ 3 ಐಟಂ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದರು ಎಂದರೆ ನಿಜ. ಸರ್ವೆ ನಂ.155 ರಲ್ಲಿ 10 ಗುಂಟೆ ನನಗೆ ಭಾಗಕ್ಕೆ ಬಂದಿದ್ದು ನಾನು ವಾರಕ್ಕೆ ಕೊಟ್ಟಿದ್ದೀರ ಎಂದರೆ ಇಲ್ಲ ನಾನೆ ಬೆಳೆ ಇಟ್ಟಿದ್ದೇನೆ ಎನ್ನುತ್ತಾರೆ. ಸರ್ವೆ ನಂ.13 ರಲ್ಲಿ 11 3/4 ಗುಂಟೆಯಲ್ಲಿ ನಾನು ಕೊತ್ತಂಬರಿ ಸೊಪ್ಪು ಬೆಳೆಯುತ್ತಿದ್ದೇನೆ ಎಂದರೆ ನಿಜ. 2 ನೇ ಪ್ರತಿವಾದಿ 11 3/4 ಗುಂಟೆಯಲ್ಲಿ ಸರ್ವೆ ನಂ.13 ರಲ್ಲಿ ಹೂವಿನ ಗಿಡಗಳನ್ನು ಹಾಕಿದ್ದಾರೆ

ಎಂದರೆ ನಿಜ. ಅವರ ಆಸ್ತಿಯಲ್ಲಿ ಒಂದು ಬಾವಿ ಇದೆ ಎಂದರೆ ನಿಜ. 2 ನೇ ಪ್ರತಿವಾದಿ ಸರ್ವೆ ನಂ.155 ರಲ್ಲಿ 10 ಗುಂಟೆಯಲ್ಲಿ ಮತ್ತು ಐಟಂ ನಂ.1 ಆಸ್ತಿಯ 20 ಗುಂಟೆಯಲ್ಲಿ ನೀಲಗಿರಿ ಹಾಕಿದ್ದಾರೆ ಎಂದರೆ ನಿಜ. ವಾದಿ ಸರ್ವೆ ನಂ.11 ರ 11 3/4 ಗುಂಟೆಗೆ ಹೂವಿನ ಗಿಡಗಳನ್ನು ಹಾಕಿದ್ದಾರೆ ಎಂದರೆ ನಿಜ. ಸರ್ವೆ ನಂ.155 ಮತ್ತು ಐಟಂ ನಂ.1 ರಲ್ಲಿ 10 ಗುಂಟೆ ಮತ್ತು 20 ಗುಂಟೆಯಲ್ಲಿ ವಾದಿ ರಾಗಿ ಇಟ್ಟಿದ್ದಾರೆ ಎಂದರೆ ನಿಜ. ಅದೇ ರೀತಿ ಸಂಜೀವಪ್ಪ ಸರ್ವೆ ನಂ.13 ರ 11 3/4 ಗುಂಟೆಯಲ್ಲಿ ಸುಗಂಧವನ್ನು ಹಾಕಿದ್ದಾರೆ ಎಂದರೆ ನಿಜ. 1 ನೇ ಪ್ರತಿವಾದಿ ದಾವಾ ಐಟಂ ನಂ.1, 2 ಮತ್ತು 4 ರಲ್ಲಿ ಅವರು ರಾಗಿ ಇಟ್ಟಿದ್ದಾರೆ ಎಂದರೆ ನಿಜ. ನನ್ನ ತಾತ ಸಂಪಾದನೆ ಮಾಡಿರುವ ಆಸ್ತಿಗಳು ದಾವಾ ಐಟಂ ನಂ.1, 2 ಮತ್ತು 3 ಎಂದರೆ ನಿಜ. ದಾವಾ ಐಟಂ ನಂ.4 ನ್ನು 1995-96 ರಲ್ಲಿ 1 ನೇ ಪ್ರತಿವಾದಿಗೆ ಗ್ರ್ಯಾಂಟ್ ಆಗಿದೆ ಎಂದರೆ ನಿಜ. ಅದರ ಪಕ್ಕದಲ್ಲಿ 1 ಎಕರೆ 30 ಗುಂಟೆಯಲ್ಲಿ ವಾದಿ ಅರ್ಜಿ ಸಲ್ಲಿಸಿದ ಕಾರಣ ಅವರಿಗೆ ಗ್ರ್ಯಾಂಟ್ ಆಗಿದೆ ಎಂದರೆ ನಿಜ. ನಮ್ಮ 4 ಜನಕ್ಕೂ ಗ್ರ್ಯಾಂಟ್ ಆಗಿದೆ ಎಂದು ತೋರಿಸಲು ದಾಖಲೆ ಇಲ್ಲ.

**4.** ನನ್ನ ತಾತನ 4 ಜನ ಮಕ್ಕಳು ಮೇಲೆ ಹೇಳಿದ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಿಜ. ನನ್ನ ತಂದೆ ಮೂರು ಜನರನ್ನು ಉಳಿಸಿ ನಿಧನರಾಗಿದ್ದಾರೆ ಎಂದರೆ ನಿಜ. ನನ್ನ ತಂದೆಯ ಉಳಿಸಿದ ಆಸ್ತಿಗಳಲ್ಲಿ ಮೂರು ಜನಕ್ಕೂ ಭಾಗವಿದೆ. ನಾನು ಹಾಕಿರುವ ತಕರಾರಿನಲ್ಲಿ ನನ್ನ ತಂಗಿಯರಿಗೆ ಭಾಗ ಬರಬೇಕು ಎಂದು ಹೇಳಿಲ್ಲ. ನನ್ನ ತಂಗಿ ಗಾಯಿತ್ರಿ ಇದೇ ನ್ಯಾಯಾಲಯದಲ್ಲಿ ವಿಭಾಗ ಕೋರಿ ಓ.ಎಸ್.ನಂ.1275/2023 ನಿಡಿ-1 ರಂತೆ ದಾವೆ ಹಾಕಿದ್ದಾರೆ ಎಂದರೆ ನಿಜ. ನಿಡಿ-2 ರಲ್ಲಿ ಸರ್ವೆ ನಂ.13 ರಲ್ಲಿ 1 ಎಕರೆ 7 ಗುಂಟೆ ಪೈಕಿ ಸರ್ವೆ ನಂ.115 ರಲ್ಲಿ ನನ್ನ ತಂದೆಯ ಆಸ್ತಿಗೆ ಮಾತ್ರ ಭಾಗ ಹಾಕಿದ್ದಾರೆ ಎಂದರೆ ನಿಜ. ನನ್ನ ತಂಗಿ ದಿನಾಂಕಃ07.04.2004 ರಲ್ಲಿ ದಾವಾ ಆಸ್ತಿ ಐಟಂ ನಂ.1 ರಲ್ಲಿ 20 ಗುಂಟೆಯನ್ನು ಮಾರಾಟ ಮಾಡಿರುವ ಕಾರಣ ಐಟಂ ನಂ.4 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವ ಕಾರಣ ಮೂರನೇ ಒಂದು ಭಾಗ ಕೇಳುತ್ತಿದ್ದಾರೆ ಎಂದರೆ ನಿಜ. ನನ್ನ ತಂಗಿ ಹಾಕಿರುವ ದಾವೆಯಲ್ಲಿ ತಕರಾರನ್ನು ಹಾಕಿದ್ದೇನೆ. ನಮಗೆ ಈಗಾಗಲೇ ಭಾಗವಾಗಿರುವ ಕಾರಣ ವಾದಿಯ ಮಾತು ಕೇಳಿ ತಕರಾರನ್ನು ಹಾಕಿದ್ದೇನೆ ಎಂದರೆ ಭಾಗ ಆಗಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು ಎಲ್ಲ ಒಟ್ಟು ಕುಟುಂಬದ ಆಸ್ತಿಗಳು ಎನ್ನುತ್ತಾರೆ. ಒಟ್ಟು ಕುಟುಂಬದ ಆಸ್ತಿಗಳು ಎಂದು ತೋರಿಸಲು ದಾಖಲೆ ಇದೆ. ನನ್ನ ತಾತನ 4 ಜನ ಗಂಡು ಮಕ್ಕಳು 20 ವರ್ಷಗಳ ಹಿಂದಿನಿಂದಲೂ ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಪ್ರತ್ಯೇಕವಾಗಿ ಸಂಪಾದನೆ ಮಾಡಿಕೊಂಡು ಇದ್ದಾರೆ ಆದರೆ ಭಾಗವಾಗಿಲ್ಲ ಎನ್ನುತ್ತಾರೆ. ಐಟಂ ನಂ.1 ರಲ್ಲಿ 20 ಗುಂಟೆ ಮಾರಿದ್ದರೂ ಸಹ ಇಲ್ಲ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರಿಯರು 20 ಗುಂಟೆಯನ್ನು ಮಾರಿರುವುದು ಸರಿ ಅಲ್ಲ ಎಂದು ದಾವೆ ಹಾಕಿಲ್ಲ ಎಂದರೆ ಸರಿಯಲ್ಲ. ನಮ್ಮ ಸಹೋದರಿಯರು 1 ನೇ ಪ್ರತಿವಾದಿಗೆ ಸೇರಿದ 4 ನೇ ಐಟಂ ಆಸ್ತಿಯಲ್ಲಿ ಭಾಗ ಬರಬೇಕು ಎಂದು ದಾವೆ ಹಾಕಿಲ್ಲ. ನನ್ನ ತಕರಾರಿನಲ್ಲಿ ಕಾರಣವನ್ನು ಹೇಳಿಲ್ಲ ಎಂದರೆ ಸುಮ್ಮನಿರುತ್ತಾರೆ. ಪಂಚಾಯ್ತಿ ಯಾವಾಗ ಆಯಿತು ಎಂದು ದಿನಾಂಕ ನೆನಪಿಲ್ಲ. ಊರಿನವರನ್ನು ಸೇರಿಸಿದ್ದೆವು. ಆ ರೀತಿ ಪಂಚಾಯ್ತಿ ಮಾಡಿಸಿಲ್ಲ ವಾದಿ ದಾವೆ ಹಾಕಿದ ನಂತರ ತಕರಾರನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಬಿಟ್ಟು ಬೇರೆ ದಾವೆಯನ್ನು ಹಾಕಿಲ್ಲ. 1 ಮತ್ತು 4 ನೇ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**